ನವಸಾಕ್ಷರ ಪುಸ್ತಕ ಮಾಲೆ ೭೮

ಯೋಜನೆಗಳು

ಟಿ. ಸಿ. ಪೂರ್ಣಿಮಾ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಅಧ್ಯಕ್ಷರು
ಡಾ. ಚಂದ್ರಶೇಖರ ಕಂಬಾರ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

ಶ್ರೀ ಲೂಕೋಸ್ ವಲ್ಲತರೈ ಐ. ಎ. ಎಸ್.
ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಉನ್ನತ ಸಲಹಾ ಸಮಿತಿ ಸದಸ್ಯರು

ಶ್ರೀಯುತರಾದ
ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೬೮

ಯೋಜನೆಗಳು

ಟಿ. ಸಿ. ಪೂರ್ಣಿಮಾ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೬

YOJANEGALU : By T. C. Poornima. Published by The Director of Prasaranga,
Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ


ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು – ೫೬೦ ೦೦೪.

ಯೋಜನೆಗಳು

ಅದು ಸುಡು ಸುಡು ಬಿಸಿಲಿನ ಸಮಯ. ಸೂರ್ಯ ತಲೆಯ ಮೇಲೆ ಏರಿದ್ದ. ಕಣ್ಣು ಬಿಡಲು ಆಗದಷ್ಟು ಬಿಸಿಲು. ನೆಲ ಕಾದು ಸುಡುತ್ತಿತ್ತು. ರಸ್ತೆಯಲ್ಲಿ ದೊಡ್ಡ ಮರಗಳೂ ಇರಲಿಲ್ಲ. ನೆರಳೂ ಇರಲಿಲ್ಲ. ಆ ದಾರಿಯಲ್ಲಿ ರಾಮಯ್ಯ ಬರುತ್ತಿದ್ದ. ಬೇರೆ ಊರಿನಿಂದ ಬಂದಿರಬೇಕು. ಕೈಯಲ್ಲಿ ಕೊಡೆ ಇತ್ತು. ಒಳ್ಳೆ ಉಡುಪು ಧರಿಸಿದ್ದ. ದೂರದಿಂದ ನಡೆದು ಬಂದಿರಬೇಕು, ಮುಖ ಸೋತಿತ್ತು, ಬೆವರು ಹರಿಯುತ್ತಿತ್ತು. ದಾರಿಯ ಬದಿಗೆ ಶಾಲೆಯ ಕಟ್ಟಡ ಇತ್ತು. ದಣಿವಾರಿಸಿಕೊಳ್ಳಲು ಅಲ್ಲೇ ಮೆಟ್ಟಿಲ ಮೇಲೆ ಕುಳಿತ. ಸ್ವಲ್ಪ ದೂರದಲ್ಲೇ ಒಂದು ನೀರಿನ ಕೊಳಾಯಿ ಇತ್ತು. ಸುತ್ತ ಕಟ್ಟಿದ್ದ ಕಟ್ಟೆ ಒಣಗಿತ್ತು. ನೀರು ಬಂದು ಬಹಳ ದಿನ ಆಗಿರಬೇಕು. ರಾಮಯ್ಯನಿಗೆ ಬಾಯಾರಿಕೆ ಆಗಿತ್ತು. ಎದ್ದು ಕೊಳಾಯಿಯ ಬಳಿಗೆ ಹೋದ, ಅದರ ತಿರುಪು ಹಿಡಿದು ತಿರುವಿದ. ಊಹೂಂ.... ಒಂದು ಹನಿ ನೀರೂ ಬರಲಿಲ್ಲ. ಅವನಿಗೆ ನಿರಾಶೆಯಾಯಿತು. ಅಷ್ಟರಲ್ಲಿ ಅಲ್ಲಿಗೆ ಒಬ್ಬಳು ಅಜ್ಜಿ ಬಂದಳು. ರಾಮಯ್ಯ ಕೊಳಾಯಿ ತಿರುವಿದ್ದು ನೋಡಿದಳು. ಅವಳು ಕೇಳಿದಳು "ಏನಪ್ಪಾ ಬಾಯಾರಿಕೆಯಾಗುತ್ತಾ?" ಅದಕ್ಕೆ ರಾಮಯ್ಯ ಹೌದೆಂದ. ಮುದುಕಿ ಹೇಳಿದಳು "ಈ ಕೊಳಾಯಿಯಲ್ಲಿ ನೀರು ಬರೋಲ್ಲ. ಮುಂದೆ ಹೋಗಪ್ಪಾ. ಅಲ್ಲಿ ಒಂದು ಪಂಪಿನ ಕೊಳಾಯಿ ಇದೆ. ಅಲ್ಲಿ ತುಂಬಾ ನೀರು ಬರುತ್ತೆ. ಯಾವಾಗಲೂ ಬರುತ್ತೆ."

"ಆಗಲಮ್ಮಾ, ಸ್ವಲ್ಪ ಹೊತ್ತು ಕುಳಿತುಕೊಳ್ಳುತ್ತೇನೆ. ತುಂಬಾ ಸೆಕೆ. ದಣಿವಾರಿಸಿಕೊಳ್ಳುತ್ತೇನೆ. ಆಮೇಲೆ ನೀರು ಕುಡಿಯುತ್ತೇನೆ" ಎಂದ ರಾಮಯ್ಯ. ಅಜ್ಜಿ "ಹೌದಪ್ಪ, ಈಗ ತುಂಬಾ ಬಿಸಿಲು. ದಾರಿಯಲ್ಲಿ ದೊಡ್ಡ ಮರಗಳಿಲ್ಲ. ಈಗ ಸಸಿಗಳನ್ನು ನೆಟ್ಟಿದ್ದಾರೆ, ಅರಣ್ಯ ಇಲಾಖೆಯವರಂತೆ. ಕಳೆದ ತಿಂಗಳು ನೆಟ್ಟರು. ಅವೆಲ್ಲಾ ಬೆಳೆದರೆ ದಾರಿ ತಂಪಾದೀತು ಅಲ್ಲವೆ?"



ಕುಡಿಯುವ ನೀರಿಗೆ ಕೊಳವೆ ಭಾವಿಯ ಬಳಕೆ

"ಹೌದಮ್ಮ, ನೀವು ಹೇಳೋದು ಸರಿ. ಮರ ಬೆಳೆಸಿದರೆ ನೆರಳೊಂದೇ ಅಲ್ಲ. ಬೇರೆ ಬೇರೆ ಉಪಯೋಗಗಳೂ ಇವೆ. ಹಣ್ಣಿನ ಮರ ಆದರೆ ಹಣ್ಣೂ ಸಿಗುತ್ತೆ. ಅದು ಸರಿ, ಇದನ್ನು ನೆಡಿಸಿದವರು ಯಾರು?"

"ಆಗಲೇ ಹೇಳಿದೆನಲ್ಲಾ. ಅರಣ್ಯ ಇಲಾಖೆಯವರು ಬಂದಿದ್ದರು. ಮರ ಬೆಳೆಸುವ ಯೋಜನೆ ಮಾಡಿದ್ದಾರಂತೆ. ನಮಗೂ ಮನೆ ಮುಂದೆ, ಹಿಂದೆ ಮರ ಬೆಳೆಸಲು ಹೇಳಿದರು. ನಮ್ಮ ಕಾಡೆಲ್ಲಾ ನಾಶವಾಗುತ್ತಿದೆಯಂತೆ. ಆದ್ದರಿಂದ ಮರಗಳನ್ನು ಹೆಚ್ಚಾಗಿ ಬೆಳೆಸಬೇಕು ಎಂದರು. ಅವರೇ ಮರಗಳನ್ನು ನೆಟ್ಟು ಕಾಡುಗಳನ್ನು ಮಾಡುತ್ತಾರಂತೆ."

ಅಜ್ಜಿಯ ಮಾತು ಕೇಳಿ ರಾಮಯ್ಯನಿಗೆ ಸಂತೋಷವಾಯಿತು. "ಇದು ಒಳ್ಳೆಯ ಯೋಜನೆಯೇ. ನಾನು ಪಕ್ಕದ ಹಳ್ಳಿಯಿಂದ ಬಂದಿದ್ದೇನೆ. ನಮ್ಮ ಊರಿನಲ್ಲೂ ಮರಗಳು ಕಡಿಮೆ, ಮರಳುಗಾಡಿನಂತಿದೆ. ನಾನು ಅರಣ್ಯ ಇಲಾಖೆಗೆ ಕಾಗದ ಬರೆಯುತ್ತೇನೆ. ನಮ್ಮ ಊರಲ್ಲೂ ಮರ ನೆಡುವಂತೆ ಕೇಳಿಕೊಳ್ಳುತ್ತೇನೆ. ನಾನಿನ್ನು ಬರುತ್ತೇನೇ." ರಾಮಯ್ಯ ಎದ್ದು ಹೊರಟ. ಅಜ್ಜಿ ಹಿಂಬಾಲಿಸಿ ಬಂದಳು. "ಬಾಯಾರಿಕೆ ಎಂದಿರಲ್ಲಾ, ಬನ್ನಿ ಇಲ್ಲೇ ಹೊಸ ಕೊಳಾಯಿ ಇದೆ. ಇದು ಬೋರ್‌ವೆಲ್ ಕೊಳಾಯಿಯಂತೆ. ತಿಳಿಯಾದ ನೀರು ಬರುತ್ತೆ. ಸ್ವಲ್ಪ ಕುಡಿಯಿರಿ" ಎಂದಳು ಅಜ್ಜಿ.

"ಅಮ್ಮಾ ನಾನು ಈ ಊರಿಗೆ ಹೊಸಬ ಅಲ್ಲ. ಆಗಾಗ ಬಂದಿದ್ದೇನೆ. ನಿಮ್ಮ ಊರಿನ ಸೋಮಯ್ಯ ನನ್ನ ಪ್ರಾಣ ಗೆಳೆಯ. ಆದರೆ ಕಳೆದ ಸಲ ಬಂದಾಗ ಈ ಕೊಳಾಯಿ ಕಂಡಿರಲಿಲ್ಲ" ರಾಮಯ್ಯ ಅಚ್ಚರಿಯಿಂದ ತೋರಿಸಿದ.

"ಹೌದು, ಇದು ಹೊಸ ಕೊಳಾಯಿ. ನಮ್ಮ ಹಳ್ಳಿಗೆ ನೀರೇ ಬರುತ್ತಿರಲಿಲ್ಲ. ಕಾಲುವೆಯೂ ಬತ್ತಿ ಹೋಗುತ್ತಿತ್ತು. ನಾವು ನಮ್ಮ ಪಂಚಾಯಿತಿ ಮುಖಂಡರಿಗೆ ಹೇಳಿದೆವು. ಅವರು ಈ ಕೊಳಾಯಿ ಹಾಕಿಸಿದರು."

ಅಜ್ಜಿ ಕೊಳಾಯಿ ಪಂಪ್ ಒತ್ತಿದಳು. ಕೊಳಾಯಿಯ ಬಾಯಲ್ಲಿ ಧಾರಾಕಾರ ನೀರು ಹರಿದು ಬಂತು. ರಾಮಯ್ಯ ಕೊಡೆಯನ್ನು ಪಕ್ಕಕ್ಕಿಟ್ಟು ಎರಡೂ ಬೊಗಸೆಯಲ್ಲಿ ನೀರು ಕುಡಿದ. ಬಾಯಾರಿಕೆ ನೀಗಿತು. ದಣಿವು ಆರಿತು. ಉಲ್ಲಾಸ ತುಂಬಿ ಬಂತು. ಅಜ್ಜಿಗೆ ನಮಸ್ಕಾರ ಹೇಳಿದ. ಸೋಮಯ್ಯನ ಮನೆ ಕಡೆ ನಡೆದ.

ನಮ್ಮ ದೇಶ ಭಾರತ. ಇದು ಹಳ್ಳಿಗಳ ದೇಶ. ಹಳ್ಳಿಗಳಲ್ಲಿ ಹೆಚ್ಚಿನ ಸವಲತ್ತುಗಳಿರುವುದಿಲ್ಲ. ಕುಡಿಯುವ ನೀರು ಇರುವುದಿಲ್ಲ, ವಿದ್ಯುತ್ ದೀಪಗಳು ಇರುವುದಿಲ್ಲ, ಸರಿಯಾದ ಶಾಲೆಗಳಿರುವುದಿಲ್ಲ, ಆಸ್ಪತ್ರೆಗಳಿರುವುದಿಲ್ಲ.

ಹಳ್ಳಿಗಳಲ್ಲಿ ಬೇಸಾಯವೇ ಮುಖ್ಯ ಕಸುಬು. ಹಳ್ಳಿಗರು ಹೆಚ್ಚಾಗಿ ರೈತರು. ಇವರು ಹಸು, ಎಮ್ಮೆ, ಕೋಳಿ, ಕುರಿಗಳನ್ನು ಸಾಕುತ್ತಾರೆ. ಇಂತಹ ಕೆಲಸಗಳನ್ನು ಮಾಡಲು ಸವಲತ್ತುಗಳು ಬೇಕು. ಸವಲತ್ತು ಎಂದರೆ ಬಿತ್ತನೆ ಬೀಜ, ರಸಗೊಬ್ಬರ, ನೀರು, ಬೇಸಾಯಕ್ಕೆ ಬೇಕೇ ಬೇಕು. ಭೂಮಿಯನ್ನು ಉಳಲು ಎತ್ತು, ನೊಗ, ನೇಗಿಲು ಎಲ್ಲ ಬೇಕು. ಆದರೆ ಇವನ್ನೆಲ್ಲ ಕೊಳ್ಳಲು ಹಣ ಇರುವುದಿಲ್ಲ. ಅವರು ಬಡವರು.

ಅವರಿಗೆ ಸರಕಾರ ಸಹಾಯ ಮಾಡುತ್ತದೆ. ಬೀಜ, ಗೊಬ್ಬರ, ನೇಗಿಲು ಕೊಳ್ಳಲು ಸಾಲ ಕೊಡುತ್ತದೆ. ಸಾಕುಪ್ರಾಣಿಗಳನ್ನು ಕೊಳ್ಳಲು ಸಹ ಹಣ ಒದಗಿಸುತ್ತದೆ. ಜನರ ಹಿತ ನೋಡಿಕೊಳ್ಳುವುದೇ ಸರಕಾರದ ಕೆಲಸ. ಹಳ್ಳಿಗಳಿಗೆ ನೀರು ಪೂರೈಸುತ್ತದೆ. ವಿದ್ಯುತ್ ದೀಪ ಪೂರೈಸುತ್ತದೆ. ಶಾಲೆಗಳಿಗಾಗಿ ಕಟ್ಟಡಗಳನ್ನು ಕಟ್ಟಿಸುತ್ತದೆ. ಆಸ್ಪತ್ರೆಗಳನ್ನು ಕಟ್ಟಿಸಿ ಕೊಡುತ್ತದೆ. ಹಾಗೆಯೇ ವಾಸಿಸಲು ಮನೆಗಳನ್ನು ಕಟ್ಟಿಸಿ ಕೊಡುತ್ತದೆ. ಇದನ್ನೆಲ್ಲಾ ಒಟ್ಟಾಗಿ ಸೇರಿಸಿ ನಾವು " ಯೋಜನೆ " ಎಂದು ಕರೆಯುತ್ತೇವೆ.

ನಿಸರ್ಗದ ಸಂಪತ್ತೇ ದೇಶದ ಆಸ್ತಿ. ನಮ್ಮ ದೇಶದಲ್ಲಿ ಹೇರಳ ಸಂಪತ್ತಿದೆ. ಒಳ್ಳೆಯ ಭೂಮಿಯೂ ಇದೆ. ತುಂಬಿ ಹರಿಯುವ ನದಿಗಳಿವೆ. ಕಾಡುಗಳಿವೆ. ಚೆನ್ನಾದ ಹವಾಮಾನ ಇದೆ. ಮಿಗಿಲಾಗಿ ಶಕ್ತಿಶಾಲಿ ಜನರಿದ್ದಾರೆ. ಇವನ್ನೆಲ್ಲಾ ಸೂಕ್ತವಾಗಿ ಬಳಸಿಕೊಳ್ಳಬೇಕು. ಅವನ್ನೆಲ್ಲ ಹೇಗೆ ಬಳಸಬೇಕು ಎಂದು ಸರಕಾರ ತಿಳಿಸುತ್ತದೆ. ಅದನ್ನೇ "ಯೋಜನೆ" ಎಂದು ಕರೆಯುತ್ತಾರೆ.

'ಯೋಜನೆ' ಎನ್ನುವುದು ನಮ್ಮೆಲ್ಲರ ಬೆಳವಣಿಗೆಯ ಮೊದಲ ಮೆಟ್ಟಿಲು. ಅಂದರೆ ಪ್ರತಿಯೊಬ್ಬ ಪ್ರಜೆಯೂ ಸುಖವಾಗಿರಬೇಕು. ಸಂತೋಷವಾಗಿರಬೇಕು. ಬದುಕಲು ಬೇಕಾದ ಎಲ್ಲ ಸವಲತ್ತುಗಳು ನಮಗಿರಬೇಕು. ಇದನ್ನೆಲ್ಲ ನಮಗೆ ಸರಕಾರ ಕೊಡಿಸುತ್ತದೆ. ಯೋಜನೆಯ ಮೂಲಕ ಕೊಡಿಸುತ್ತದೆ.

ಭಾರತವನ್ನು ಮೊದಲು ಬ್ರಿಟಿಷರು ಆಳುತ್ತಿದ್ದರು. ಅವರು ಸಾವಿರದ ಒಂಭೈನೂರ ನಲವತ್ತೇಳರಲ್ಲಿ ದೇಶವನ್ನು ಬಿಟ್ಟು ಹೋದರು. ನಾವು ಸ್ವತಂತ್ರರಾದೆವು. ಆದರೆ ಬಡವರೂ ಆಗಿದ್ದೆವು. ನಮಗೆ ಆಹಾರದ ಕೊರತೆ ಇತ್ತು, ಮಾಡಲು ಕೆಲಸ ಇರಲಿಲ್ಲ. ಸುಮ್ಮನೆ ಕೂತರೆ ದುಡ್ಡು ಬರುತ್ತದೆಯೇ? ಇಲ್ಲ. ದುಡಿಯದೆ ಹಣ ಸಿಗುವುದಿಲ್ಲ. ಆದರೆ ದುಡಿಯುವುದಕ್ಕೆ ತಕ್ಕ ಕೆಲಸಗಳು ಬೇಕಾಗಿತ್ತು. ಜನರಿಗೆ ತಿನ್ನಲು ಅನ್ನ ಬೇಕಾಗಿತ್ತು. ತೊಡಲು ಬಟ್ಟೆ ಬೇಕಾಗಿತ್ತು. ಆದರೆ ನಮ್ಮಲ್ಲಿ ಇದ್ದದ್ದು ನಮಗೆ ಸಾಕಾಗುತ್ತಿರಲಿಲ್ಲ. ಆಗ ಸರಕಾರ ಅದನ್ನೆಲ್ಲ ಒದಗಿಸುವುದಕ್ಕೆ ಮನಸ್ಸು ಮಾಡಿತು. ಯೋಜನೆಗಳನ್ನು ರೂಪಿಸಿತು. ಅವೇ ಪಂಚವಾರ್ಷಿಕ ಯೋಜನೆಗಳು.

ಯೋಜನೆಗಳನ್ನು ಮಾಡಲು ಒಂದು ಸಂಸ್ಥೆ ಆಯಿತು. ಅದನ್ನು 'ಯೋಜನಾ ಆಯೋಗ' ಎನ್ನುತ್ತೇವೆ. ಸಾವಿರದ ಒಂಭೈನೂರ ಐವತ್ತರಲ್ಲಿ ಆಯೋಗ ಕೆಲಸ ಆರಂಭಿಸಿತು. ಈ ಸಂಸ್ಥೆ ಯೋಜನೆಗಳನ್ನು ರೂಪಿಸುತ್ತದೆ. ಅವನ್ನು ಕಾರ್ಯರೂಪಕ್ಕೆ ತರುವಂತೆ ನೋಡಿಕೊಳ್ಳುತ್ತದೆ. ಸರಕಾರ ಯೋಜನೆಯಲ್ಲಿ ಹೇಳಿರುವ ಕೆಲಸಗಳನ್ನು ಮಾಡಿಸುತ್ತದೆ.

ಪಂಚವಾರ್ಷಿಕ ಯೋಜನೆಗಳು


ಇದು ಐದು ವರ್ಷದ ಯೋಜನೆ. ಐದು ವರ್ಷಗಳಿಗೆ ಒಮ್ಮೆ ಹೊಸ ಯೋಜನೆ ಆಗುತ್ತದೆ. ಸಾವಿರದ ಒಂಭೈನೂರ ಐವತ್ತೊಂದರಲ್ಲಿ ಮೊದಲ ಯೋಜನೆ ಆರಂಭ. ಆಗ ಜವಾಹರಲಾಲ ನೆಹರೂ ನಮ್ಮ ದೇಶದ ಪ್ರಧಾನಿ ಆಗಿದ್ದರು. ಅವರೇ ಯೋಜನಾ ಆಯೋಗದ ಮೊದಲ ಅಧ್ಯಕ್ಷರು.

ಈವರೆಗೆ ನಮ್ಮ ದೇಶದಲ್ಲಿ ಏಳು ಪಂಚವಾರ್ಷಿಕ ಯೋಜನೆಗಳಾಗಿವೆ. ಎಂಟನೇ ಪಂಚವಾರ್ಷಿಕ ಯೋಜನೆ ಜಾರಿಯಲ್ಲಿದೆ. ಮಧ್ಯೆ ಮೂರು ಪಂಚವಾರ್ಷಿಕ ಯೋಜನೆಗಳು ಆಗಲಿಲ್ಲ. ಆಗ ಮೂರು ವಾರ್ಷಿಕ ಯೋಜನೆಗಳಾದವು.

***

ರಾಮಯ್ಯ ಸೋಮಯ್ಯನ ಹಳ್ಳಿಗೆ ಬಂದದ್ದು ಏಕೆ?

ಅಜ್ಜಿಗೆ ನಮಸ್ಕಾರ ಹೇಳಿ ರಾಮಯ್ಯ ಮುನ್ನಡೆದ. ಸೋಮಯ್ಯನ ಮನೆ ಸಿಕ್ಕಿತು. ಮುಂಬಾಗಿಲು ಮುಚ್ಚಿತ್ತು, ಬಾಗಿಲು ತಟ್ಟಿದ. ಕಿರ್ರೆಂದು ಬಾಗಿಲು ತೆರೆಯಿತು.



ಅತಿಥಿಗಳಿಗೆ ವಂದಿಸುವುದು ಸಭ್ಯತೆಯ ಲಕ್ಷಣ

ಸೋಮಯ್ಯನ ಹೆಂಡತಿ ಬಾಗಿಲು ತೆಗೆದಳು. ಗಂಡನ ಗೆಳೆಯನನ್ನು ನೋಡಿದಳು 'ನಮಸ್ಕಾರ ಒಳಗೆ ಬನ್ನಿ' ಎಂದಳು. ರಾಮಯ್ಯ ಚಪ್ಪಲಿ ಕಳಚಿ ಒಳಗೆ ಬಂದ. ಹಜಾರ ತುಂಬಾ ದೊಡ್ಡದಾಗಿತ್ತು. ಮೂಟೆಗಳನ್ನು ಸಾಲಾಗಿ ಜೋಡಿಸಿದ್ದರು, ಅವೆಲ್ಲಾ ಭತ್ತ, ರಾಗಿಯ ಮೂಟೆಗಳು. ರಾಮಯ್ಯನಿಗೆ ವಿಸ್ಮಯವಾಯಿತು. ಸೋಮಯ್ಯನ ಮನೆಯಲ್ಲಿ ಯಾವಾಗಲೂ ಅಷ್ಟೊಂದು ತುಂಬಿದ ಮೂಟೆಗಳಿರಲಿಲ್ಲ, ಈಗ ಎಷ್ಟೊಂದಿದೆ. ಅದು ಹೇಗೆ ಸಾಧ್ಯವಾಯಿತು?

ಸೋಮಯ್ಯ ಒಳಗಿನಿಂದ ಬಂದ, ಗೆಳೆಯನನ್ನು ನೋಡಿದ. ಸಂತೋಷವಾಯಿತು. ' ಬಾರಯ್ಯ ಬಾ, ತುಂಬಾ ಅಪರೂಪ ಆಗಿಬಿಟ್ಟೆ? ಏನು ವಿಶೇಷ? ಎಂದ. ರಾಮಯ್ಯ ಒಳಗೆ ಬಂದ. ಇಬ್ಬರೂ ತೂಗುಯ್ಯಾಲೆಯಲ್ಲಿ ಕುಳಿತರು. ಲೋಕಾಭಿರಾಮ ಮಾತನಾಡಿದರು. ತಿಂಡಿ ತಿಂದರು, ಕಾಫಿ ಕುಡಿದರು. ಸೋಮಯ್ಯ ನಗುನಗುತ್ತಿದ್ದ. ಆದರೆ ರಾಮಯ್ಯನ ಮುಖದಲ್ಲಿ ಚಿಂತೆ ಇದ್ದಿತು. ಒಮ್ಮೊಮ್ಮೆ ಸುಮ್ಮನೆ ಕುಳಿತಿರುತ್ತಿದ್ದ. ಸೋಮಯ್ಯ ಕೇಳಿದ "ರಾಮು, ಏನಾಯ್ತು ನಿನಗೆ, ಹೀಗೆ ಯಾಕೆ ಸಪ್ಪೆ ಮುಖ ಮಾಡಿ ಕುಳಿತಿದ್ದೀಯಾ?" ಎಂದ. ರಾಮಯ್ಯ ಹೇಳಿದ, "ಏನು ಹೇಳಲಿ ಸೋಮು, ಈ ವರ್ಷ ಫಸಲು ಸರಿಯಾಗಿ ಬಂದಿಲ್ಲ. ಬೆಳೆದದ್ದು ಮೂರು ತಿಂಗಳಿಗೇ ಸಾಲದು. ಮನೆಯಲ್ಲಿ ತಿನ್ನುವ ಬಾಯಿಗಳೂ



ಮಾತುಕತೆಯಲ್ಲಿ ಗೆಳೆಯರು

ಹೆಚ್ಚು. ದೊಡ್ಡ ಮಗಳಿಗೂ ಹದಿನೆಂಟು ವರ್ಷವಾಯಿತು. ಮದುವೆಗೆ ಯೋಚನೆ ಮಾಡುತ್ತಿದ್ದೇನೆ. ಚಿಕ್ಕ ಮಕ್ಕಳು ಕೂಲಿ ಮಾಡುತ್ತಾರೆ. ಅವರ ಕೂಲಿಯೂ ಸಾಕಾಗುವುದಿಲ್ಲ.


ಏನು ಮಾಡುವುದು ಎಂದು ತೋಚುತ್ತಲೇ ಇಲ್ಲ" ಎಂದನು. ಇದನ್ನು ಕೇಳಿ ಸೋಮಯ್ಯನಿಗೂ ಬೇಸರವಾಯಿತು. ಮತ್ತೆ ರಾಮಯ್ಯ ಕೇಳಿದ" ಸೋಮು, ನೀನು ಇಷ್ಟೊಂದು ಫಸಲು ತೆಗೆದಿದ್ದೀಯಾ? ಇದು ಹೇಗೆ ಸಾಧ್ಯವಾಯಿತು ನಿನಗೆ? ನಿನಗೂ ನನಗಿರುವಷ್ಟೇ ಜಮೀನು ಇದೆ ಅಲ್ಲವಾ?"

"ಅಹುದು, ನಿನಗಿರುವಷ್ಟೇ ಭೂಮಿ ನನಗೂ ಇರುವುದು. ಫಸಲು ಹೆಚ್ಚು ತೆಗೆದದ್ದೂ ನಿಜ. ಇದು ವರ್ಷಕ್ಕೂ ಆಗಿ ಮಿಗುತ್ತದೆ. ಸ್ವಲ್ಪ ಮಾರಲೂಬಹುದು."

"ನೀವಿರುವುದು ಮೂರೇ ಜನ. ಗಂಡ, ಹೆಂಡತಿ, ಒಬ್ಬ ಮಗಳು. ವರ್ಷಕ್ಕೆ ಆಗದೆ ಏನು?" ಎಂದ ರಾಮಯ್ಯ.

"ನಾನು ನಿನಗೂ ಹೇಳಲಿಲ್ಲವೇ. ಹೆಚ್ಚು ಮಕ್ಕಳು ಬೇಡ. ಹೆಣ್ಣಾದರೇನು? ಗಂಡಾದರೇನು? ಒಂದೇ ಒಂದು ಸಾಕು ಎಂದು. ಕೇಳಿದೆಯಾ ನೀನು? ನಾಲ್ವರು ಹೆಣ್ಣು ಮಕ್ಕಳಾದರು. ಆಮೇಲೆ ಮಗ ಹುಟ್ಟಿದ. ನಿನ್ನ ಮಡದಿಗೂ ಕಾಯಿಲೆಯಾಯಿತು. ಒಬ್ಬ ಮಗಳಿಗೆ ಪೋಲಿಯೋ ಆಯಿತು. ಈಗ ತಿನ್ನುವ ಬಾಯಿ ಹೆಚ್ಚು ಎನ್ನುತೀಯಾ" ಸೋಮಯ್ಯ ಕಟುವಾಗಿ ಹೇಳಿದ. ರಾಮಯ್ಯನಿಗೆ ತಾನು ಮಾಡಿದ್ದು ತಪ್ಪೆನಿಸಿತು. ಸೋಮಯ್ಯ ಮೊದಲೇ ಹೇಳಿದ್ದ ಒಂದು ಮಗು ಸಾಕೆಂದು. ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಸೂಚಿಸಿದ್ದ. ರಾಮಯ್ಯ ಹಾಗೆ ಮಾಡಲಿಲ್ಲ. ಮಕ್ಕಳಿಗೆ ಪೋಲಿಯೋ ವಿರುದ್ಧ ಚುಚ್ಚುಮದ್ದು ಕೊಡಿಸಲು ಹೇಳಿದ್ದ. ರಾಮಯ್ಯ ಅದನ್ನೂ ಮಾಡಲಿಲ್ಲ. ಮಗಳು ಕುಂಟಿಯಾದಳು.

ರಾಮಯ್ಯನ ಹಳ್ಳಿಯಲ್ಲೂ ಸರಕಾರಿ ಆಸ್ಪತ್ರೆ ಇತ್ತು. ಅಲ್ಲಿ ಉಚಿತ ಸೇವೆ ಸಿಗುತ್ತಿತ್ತು. ಆದರೆ ರಾಮಯ್ಯನ ಹೆಂಡತಿ ಗಂಡುಮಗುವಾಗಲಿ ಎಂದಳು. ರಾಮಯ್ಯನೂ ಅವಳಿಗೆ ಬುದ್ಧಿ ಹೇಳಲಿಲ್ಲ. ಈಗ ಮಕ್ಕಳನ್ನು ಸಾಕುವ ಶಕ್ತಿ ಅವರಿಗಿಲ್ಲ. ಹೆಂಡತಿಯ ಆರೋಗ್ಯವೂ ಸರಿಯಾಗಿಲ್ಲ. ಅವಳಿಗೆ ಕ್ಷಯರೋಗ ಅಂಟಿದೆ. ಈಗ ಆಸ್ಪತ್ರೆಗೆ ಹೋಗಿ ವೈದ್ಯರಿಗೆ ತೋರಿಸಿದ್ದಾಳೆ. ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆಯುತ್ತಿದ್ದಾಳೆ. ಈಗಿನ್ನೂ ಚೇತರಿಸಿಕೊಳ್ಳುತ್ತಿದ್ದಾಳೆ. ಕ್ಷಯ ರೋಗಕ್ಕೆ ಸರಕಾರೀ ಆಸ್ಪತ್ರೆಯಲ್ಲಿ ಉಚಿತ ಸೇವೆ ಮಾಡುತ್ತಾರೆ. ಅದೊಂದೇ ಸಮಾಧಾನ.



ಮಿತ ಸಂಸಾರ ಹಿತ ಸಂಸಾರ

ಸೋಮಯ್ಯ ರಾಮಯ್ಯನ ಹೆಗಲು ತಟ್ಟಿದ. ಏನೋ ಚಿಂತೆಯಲ್ಲಿದ್ದ ರಾಮಯ್ಯ ಬೆಚ್ಚಿದ. "ಹೆದರಬೇಡ ರಾಮು. ಆದದ್ದು ಆಗಿಹೋಯಿತು. ಈಗ ಏನು ಮಾಡಬೇಕೂಂತ ಇದ್ದೀಯಾ?"

"ಬಿತ್ತನೆ ಕಾಲ ಹತ್ತಿರ ಬರುತ್ತಾ ಇದೆ. ಬೀಜ ಕೊಳ್ಳಲು ಹಣ ಇಲ್ಲ. ಗೊಬ್ಬರವೂ ಬೇಕು. ಉಳಲು ಎತ್ತುಗಳೂ ಇಲ್ಲ. ಬಾಡಿಗೆಗೆ ತೆಗೆದುಕೊಳ್ಳಬೇಕು. ನನ್ನ ಕೈಲಿ ಬೇಸಾಯ ಮಾಡುವಷ್ಟು ಶಕ್ತಿಯೂ ಇಲ್ಲ. ಕೂಲಿ ಕೊಟ್ಟು ಉಳುಮೆ ಮಾಡಿಸಬೇಕು. ಸೋಮು ಸ್ವಲ್ಪ ಹಣ ಸಾಲ ಕೊಟ್ಟಿರು. ಬೆಳೆ ಆದ ಮೇಲೆ ಹಿಂತಿರುಗಿಸುತ್ತೇನೆ."

"ನನ್ನ ಹತ್ತಿರ ಹಣ ಏನೋ ಇದೆ. ಆದರೆ ನಾನು ಬ್ಯಾಂಕಿನ ಸಾಲ ವಾಪಸ್ಸು ಮಾಡಬೇಕು. ಇಲ್ಲದಿದ್ದರೆ ಮತ್ತೆ ನನಗೆ ಸಾಲ ಸಿಗೋಲ್ಲ ಏನು ಮಾಡಲಿ?" ಸೋಮು ಯೋಚಿಸುತ್ತ ಕುಳಿತ. ತನ್ನ ಗೆಳೆಯನಿಗೆ ಸಹಾಯ ಮಾಡುವ ಮನಸ್ಸು ಅವನಿಗಿತ್ತು.

"ಹ್ಞಾಂ, ಒಂದು ಕೆಲಸ ಮಾಡು ರಾಮು, ನೀನೂ ಬ್ಯಾಂಕಿನಲ್ಲಿ ಸಾಲ ಪಡೆದುಕೋ" ಬ್ಯಾಂಕಿನಲ್ಲಿ ಸಾಲ ಸಿಗುವ ವಿಷಯ ರಾಮಯ್ಯನಿಗೆ ತಿಳಿದಿರಲಿಲ್ಲ. ಈಗ ಕೇಳಿ ಅಚ್ಚರಿ ಆಯಿತು. ಸಂತೋಷವೂ ಆಯಿತು. "ಆದರೆ ಸಾಲ ಯಾಕೆ ಅಂತ ಕೊಡುತ್ತಾರೆ ಸೋಮು?", "ನೋಡು, ಬಿತ್ತನೆ ಬೀಜ, ರಸಗೊಬ್ಬರ ಕೊಳ್ಳೋದಕ್ಕೆ ಕೊಡುತ್ತಾರೆ. ಅಲ್ಲದೆ ಕುರಿ, ಕೋಳಿ ಸಾಕೋದಕ್ಕೆ ಹಾಗೂ ಮನೆಯಲ್ಲೇ ಸ್ವಂತ ಉದ್ಯೋಗ ಮಾಡೋದಕ್ಕೂ ಸಾಲ ಸಿಗುತ್ತೆ."

"ಸ್ವಂತ ಉದ್ಯೋಗ ಮಾಡೋದು ಹೇಗೆ?" ರಾಮಯ್ಯ ಪ್ರಶ್ನೆ ಮಾಡಿದ.

"ನಿನ್ನ ದೊಡ್ಡ ಮಗಳಿಗೆ ಹದಿನೆಂಟು ವರ್ಷ ಅಂತೀಯ. ಬಟ್ಟೆ ಹೊಲಿಯೋ ಯಂತ್ರ ಕೊಳ್ಳಬಹುದು. ಸಾಲ ಸಿಗುತ್ತೆ, ಮಹಿಳಾ ಮಂಡಲಿಯಲ್ಲಿ ವಿಚಾರಿಸು. ಬಟ್ಟೆ ಹೊಲಿಯೋದರಲ್ಲಿ ತರಬೇತಿ ಕೊಡುತ್ತಾರೆ. ಅವಳು ಮನೆಯಲ್ಲೇ ಕುಳಿತು ಬಟ್ಟೆ ಹೊಲಿಯೋದರಲ್ಲಿ ನಾಲ್ಕು ಕಾಸು ಸಂಪಾದಿಸಲಿ. ಅಂದಹಾಗೆ ನಿನ್ನ ಎರಡನೆ ಮಗಳಿಗೆ ಪೋಲಿಯೋ ಅಂದೆಯಲ್ಲಾ?" ರಾಮಯ್ಯ ಹೌದೆನ್ನುವಂತೆ ತಲೆಯಲ್ಲಾಡಿಸಿದ.

ಅಂಗವಿಕಲ ಮಕ್ಕಳಿಗೆ ತಿಂಗಳಿಗೊಮ್ಮೆ ವೇತನ ಸಿಗುತ್ತೆ. ಸರಕಾರ ತಿಂಗಳು ತಿಂಗಳು "ಆ ಮಕ್ಕಳ ಕ್ಷೇಮಕ್ಕೆ ಸ್ವಲ್ಪ ಹಣ ಕೊಡುತ್ತೆ" ಸೋಮಯ್ಯ ಹೇಳಿದ.

"ಅದಕ್ಕೆ ಯಾರನ್ನ ಕೇಳಬೇಕು ಸೋಮು?"

"ಅಂಗವಿಕಲರ ಕಲ್ಯಾಣ ಅಭಿವೃದ್ಧಿ ಸಂಸ್ಥೆ ಅಂತ ಇದೆ, ಅಲ್ಲಿಗೆ ಹೋಗು ವೈದ್ಯರ ಪ್ರಮಾಣಪತ್ರ ತೋರಿಸು. ಮಗಳಿಗೆ ವೇತನ ಸಿಗುತ್ತೆ. ಆ ಹಣವನ್ನು ಹಾಲು

ಮಾಡಬೇಡ. ಅವಳಿಗೆ ವಿದ್ಯಾಭ್ಯಾಸ ಕೊಡಿಸು. ಹತ್ತನೇ ತರಗತಿ ಪಾಸು ಮಾಡಲಿ, ಆಮೇಲೆ ಏನಾದರೂ ಕೆಲಸ ಸುಲಭವಾಗಿ ಸಿಗುತ್ತೆ. ಅಂಗವಿಕಲರಿಗೆ ಮೀಸಲಾತಿ ಇದೆ ಅಂತ ಗೊತ್ತಲ್ಲ?"

"ಗೊತ್ತು, ಗೊತ್ತು. ನಮ್ಮ ಹಳ್ಳಿಯ ಹುಡುಗನೊಬ್ಬ ಮೂಗ, ಹತ್ತನೇ ತರಗತಿ ಪಾಸಾಗಿದ್ದಾನೆ. ಅವನಿಗೆ ಸರಕಾರಿ ಕಛೇರಿಯಲ್ಲಿ ಕೆಲಸ ಸಿಕ್ಕಿದೆ. ಹ್ಞಾಂ! ಬೇಸಾಯಕ್ಕೆ ಸಾಲ......?"



ಸಹಕಾರ ಸಂಘದಲ್ಲಿ ಸಾಲ ವಿತರಣೆ

"ನಿಮ್ಮ ಹಳ್ಳಿಯಲ್ಲೂ ಸಹಕಾರ ಸಂಘ ಇರಬೇಕಲ್ಲ. ಅಲ್ಲಿ ಹೋಗಿ ವಿಚಾರಿಸು. ಸಾಲ ಕೊಡುತ್ತಾರೆ. ನಿನ್ನ ಹೆಂಡತಿಗೂ ಕೆಲಸ ಕೊಡು. ಮನೆಯಲ್ಲೇ

ಕೋಳಿ, ಕುರಿ ಸಾಕಲಿ ಅಥವಾ ರೇಷ್ಮೆ ಹುಳು ಸಾಕಲಿ. ನನ್ನ ಹೆಂಡತಿ ರೇಷ್ಮೆ ಹುಳು ಸಾಕಿದ್ದಾಳೆ. ಅದಕ್ಕೂ ಸಾಲ ಸಿಗುತ್ತೆ. ಆದ್ದರಿಂದ ಆದಾಯವೂ ಬರುತ್ತೆ."

ಸೋಮಯ್ಯ ಇಷ್ಟು ಹೇಳಿದ. ರಾಮಯ್ಯನಿಗೆ ಸಂತೋಷವೇನೋ ಆಯಿತು. ಆದರೆ ಒಂದು ಪ್ರಶ್ನೆ ಅವನ ತಲೆಯಲ್ಲಿ ಅದೇ ಸಾಲಕ್ಕೆ ಹಾಕುವ ಬಡ್ಡಿ? ಇಂತಹ ಸಾಲಗಳಿಗೆ ಹಾಕುವ ಬಡ್ಡಿದರ ಬಹಳ ಕಡಿಮೆ. ರೈತರ ಹಿತಕ್ಕಾಗೇ ಈ ಸಾಲಗಳಿವೆ. ಸಾಲ ಪಡೆದು ಬೆಳೆ ತೆಗೆಯಬಹುದು. ಆದರೆ ಒಂದು ವಿಷಯ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಅದೇ ಸಾಲ ವಾಪಸ್ಸು ಮಾಡುವ ವಿಚಾರ. ಸಾಲ ವಾಪಸ್ಸು ಮಾಡಿದರೆ ಮತ್ತೆ ಸಾಲ ದೊರೆಯುತ್ತದೆ.

***

ದೇಶ ಮುಂದುವರೆಯಬೇಕು. ಅದಕ್ಕೆ ಮೊದಲು ಹಳ್ಳಿಗಳು ಮುಂದುವರಿಯಬೇಕು. ಇದೇ ಯೋಜನೆಗಳ ಸಾರ.

ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿಗೇ ಮೊದಲ ಸ್ಥಾನ. ನಮ್ಮ ದೇಶದ ಆಧಾರ ಬೇಸಾಯ, ಜೊತೆಗೆ ಆಹಾರದ ಕೊರತೆ ಇದೆ. ಜನಸಂಖ್ಯೆಯೂ ಹೆಚ್ಚುತ್ತಿದೆ. ಈಗ ನಾವು ಹೆಚ್ಚು ಬೆಳೆ ಬೆಳೆಯಬೇಕು. ಕಾರ್ಖಾನೆಗಳೂ ಬೆಳೆಯುತ್ತಿವೆ. ಅದಕ್ಕೂ ಕಚ್ಚಾ ಪದಾರ್ಥ ಬೇಕು. ಕೈಗಾರಿಕೆ ಕೃಷಿಯನ್ನು ಅವಲಂಬಿಸಿದೆ. ಆದ್ದರಿಂದ ವ್ಯವಸಾಯರಂಗ ಬಲಗೊಳ್ಳಬೇಕು.

ವ್ಯವಸಾಯಕ್ಕೆ ನೀರು ಬೇಕು, ಮಳೆ ಯಾವಾಗಲೂ ಬೀಳುವುದಿಲ್ಲ. ನೀರಾವರಿ ಸೌಲಭ್ಯ ಆಗಬೇಕು. ನಮ್ಮಲ್ಲಿ ಸಾಕಷ್ಟು ಒಣ ಭೂಮಿಯೂ ಇದೆ. ಅಲ್ಲೂ ಬೇಸಾಯ ಮಾಡಿದರೆ ಒಳ್ಳೆಯದು. ಎತ್ತು ಹಿಡಿದು ಉಳುವ ಪದ್ಧತಿ ಹಳೆಯದು. ಈಗ ಕಾಲ ಬದಲಾಗಿದೆ. ವಿಜ್ಞಾನ ಬೆಳೆದಿದೆ. ಹೊಸ ಯಂತ್ರಗಳು ಬಂದಿವೆ. ನಾವು ಅವನ್ನು




ಟ್ರ್ಯಾಕ್ಟರ್ ಬಳಸಿ ಬೇಸಾಯ

ಬಳಸಬೇಕು. ಬೇಸಾಯ ಮಾಡಬೇಕು. ಆಗ ಹೆಚ್ಚು ಫಸಲು ತೆಗೆಯಬಹುದು. ಇದನ್ನೆಲ್ಲ ನಮ್ಮ ಯೋಜನೆಗಳು ತಿಳಿಸುತ್ತವೆ.

ಹಾಗೆಯೇ ಕುಟುಂಬ ಯೋಜನೆ, "ಚಿಕ್ಕ ಸಂಸಾರ ಚೊಕ್ಕ ಸಂಸಾರ." ಹೆಚ್ಚು ಮಕ್ಕಳು ಪಡೆಯುವುದು ಒಳ್ಳೆಯದಲ್ಲ, ಆಮೇಲೆ ಬದುಕು ರಾಮಯ್ಯನಂತಾದೀತು. ಸೋಮಯ್ಯನಿಗೆ ಒಂದೇ ಮಗು, ಅವನು ಸುಖವಾಗಿದ್ದಾನೆ. ನೋಡಿ.

***

"ನೋಡು ರಾಮು ನಾನೂ ಸಾಲ ತೆಗೆದುಕೊಂಡೆ. ಚೆನ್ನಾಗಿ ಕೆಲಸ ಮಾಡಿದೆ. ಫಸಲೂ ಚೆನ್ನಾಗಿ ಬಂತು. ಮನೆಗೆ ಬೇಕಾದಷ್ಟು ಇಟ್ಟುಕೊಂಡೆ. ಉಳಿದದ್ದು ಮಾರಿದೆ. ಬಂದ ಹಣ ಬೇರೆ ಖರ್ಚಿಗಾಯಿತು. ನನ್ನ ಹೆಂಡತಿ ರೇಷ್ಮೆ ಹುಳ ಸಾಕಿದ್ದಾಳೆ. ಅದರಲ್ಲೂ ಸಾಕಷ್ಟು ಲಾಭ ಬಂದಿದೆ. ಅದನ್ನು ಬ್ಯಾಂಕಿನಲ್ಲಿ ಉಳಿತಾಯ ಮಾಡಿದ್ದೇನೆ. ಮಗಳ ಹೆಸರಿನಲ್ಲಿ ಇಟ್ಟಿದ್ದೇನೆ. ಅವಳ ಮದುವೆಗೆ ಆಗುತ್ತೆ.".



ರೇಷ್ಮೆ ಕೃಷಿ ಮಹಿಳೆಯರಿಗೊಂದು ಉತ್ತಮ ಕಸುಬು

ಅಷ್ಟರಲ್ಲಿ ಬಾಗಿಲ ಸದ್ದಾಯಿತು. ಸೋಮಯ್ಯ ಹೋಗಿ ಬಾಗಿಲು ತೆಗೆದ. ಅವನ ಮಗಳು ಒಳಗೆ ಬಂದಳು. ಕಾಲೇಜಿಗೆ ಹೋಗಿದ್ದಳು. ರಾಮಯ್ಯನನ್ನು ನೋಡಿ ನಮಸ್ಕರಿಸಿದಳು."ಚೆನ್ನಾಗಿದ್ದೀಯಾ ಮಾಮಾ" ಎಂದಳು. ಅವಳಿಗೂ ರಾಮಯ್ಯನ ಮಗಳಷ್ಟೇ ವಯಸ್ಸು. ನೋಡಲು ಜಾಣೆಯಂತೆ ಕಾಣುತ್ತಾಳೆ. ಕಾಲೇಜಿನಲ್ಲಿ ಓದುತ್ತಿದ್ದಾಳೆ. ಮುಂದೆ ಅವಳಿಗೂ ಕೆಲಸ ಸಿಗಬಹುದು. ತನ್ನ ಕಾಲ ಮೇಲೆ ತಾನು ನಿಲ್ಲಬಹುದು.

"ಮಕ್ಕಳನ್ನು ಓದಿಸುತ್ತಿದ್ದೀಯಾ ರಾಮು?" ಸೋಮಯ್ಯ ಕೇಳಿದ. ರಾಮಯ್ಯ ಇಲ್ಲ ಎನ್ನುವಂತೆ ತಲೆ ಅಲ್ಲಾಡಿಸಿದ. "ಅವರೆಲ್ಲ ಕೂಲಿ ಮಾಡುತ್ತಾರೆ" ಎಂದ.

"ಅಯ್ಯೋ, ಅಯ್ಯೋ ತಪ್ಪು ರಾಮು. ಮಕ್ಕಳನ್ನು ಕೂಲಿ ಕೆಲಸಕ್ಕೆ ಕಳಿಸಬಾರದು. ಮಕ್ಕಳನ್ನು ಪಡೆಯುವುದು, ದುಡಿಸಿಕೊಳ್ಳೋದಕ್ಕಲ್ಲ. ಅವರಿಗೆ ಶಿಕ್ಷಣ ಕೊಡು. ಉಚಿತ ಶಿಕ್ಷಣ ಕೊಡುತ್ತಾರೆ. ಶಿಕ್ಷಣ ಅನ್ನೋದು ಕಡ್ಡಾಯವಾಗಿ ನಡೆಯಲೇಬೇಕು. ಇಲ್ಲದಿದ್ದರೆ ನಿನ್ನ ಮಕ್ಕಳೂ ಹೆಬ್ಬೆಟ್ಟು ಬಳಸಬೇಕಾಗುತ್ತೆ, ನಿನ್ನ ಹಾಗೆ."



"ಮಾಮಾ ಚೆನ್ನಾಗಿದ್ದೀರಾ"? ಎನ್ನುವ ಸೋಮಯ್ಯನ ಮಗಳು

"ಸರಿ ಸೋಮು, ನೀನು ಹೇಳಿದ ಹಾಗೇ ಕೇಳುತ್ತೇನೆ. ಚಿಕ್ಕವರನ್ನ ಶಾಲೆಗೆ ಕಳಿಸುತ್ತೇನೆ. ದೊಡ್ಡವಳದಂತೂ ಮುಗಿಯಿತು."

"ಯಾಕೆ ಹಾಗೆ ಹೇಳುತ್ತೀಯಾ? ಅವಳೂ ಶಿಕ್ಷಣ ಪಡೆಯಬಹುದು."

"ಅದು ಹೇಗೆ?"

"ವಯಸ್ಕರ ಶಿಕ್ಷಣ ಶಾಲೆಗೆ ಅವಳನ್ನು ಕಳುಹಿಸು. ನಿನ್ನ ಹೆಂಡತಿಯೂ ಹೋಗಬಹುದು. ನೀನೂ ಹೋಗಬಹುದು. ನಾವೆಲ್ಲರೂ ಅಕ್ಷರ ತಿಳಿದಿರಬೇಕು. ಓದಲು ಬರೆಯಲು ಕಲಿಯಬೇಕು. ನಾವೂ ಕಲಿತೂ ಬೇರೆಯವರಿಗೂ ಕಲಿಸಬೇಕು."

"ಅಹುದು, ನಮ್ಮ ಹಳ್ಳಿಯಲ್ಲೂ ಅಂತಹ ಶಾಲೆ ಇದೆ. ಸಾಯಂಕಾಲ ಇಲ್ಲಿ ಕಲಿಸುತ್ತಾರೆ. ಕೆಲಸ ಮುಗಿದ ಮೇಲೆ ಬಿಡುವು ಸಿಗುತ್ತದೆ. ಆಗ ಇಲ್ಲಿ ಕಲಿಯುತ್ತೇವೆ. ನಾವೂ ಸಹ ಸಾಕ್ಷರರಾಗುತ್ತೇವೆ."

ಸೋಮಯ್ಯನಿಗೆ ಸಂತೋಷವಾಯಿತು.

"ಭೇಷ್ ರಾಮು! ಇದೀಗ ನೀನೂ ತಿಳಿದವನಾದೆ."

ಅಷ್ಟರಲ್ಲಿ ಸೋಮಯ್ಯನ ಹೆಂಡತಿ ಬಂದಳು. ಊಟಕ್ಕೆ ಮಣೆ ಹಾಕಿದಳು. ಗೆಳೆಯರಿಬ್ಬರೂ ಊಟಕ್ಕೆ ಕುಳಿತರು. ಮಗಳು ಎಲೆ ಹಾಸಿದಳು. ಅನ್ನ ಬಡಿಸಿದಳು. ಇಬ್ಬರೂ ಊಟ ಮಾಡತೊಡಗಿದರು. ಒಂದು ನೊಣ ರೊಯ್ಯನೆ ಹಾರಿ ಬಂತು. ಸೋಮಯ್ಯನ ಎಲೆ ಮೇಲೆ ಕುಳಿತುಕೊಂಡಿತು. ಇದರಿಂದಾಗಿ ಅವನಿಗೆ ಕೋಪ ಬಂತು. ಆಳನ್ನು ಕೂಗಿದ. ಕೆಂಚ ಓಡಿಬಂದ "ಕೆಂಚ, ಚರಂಡಿಗೆ ಡಿ.ಡಿ.ಟಿ. ಹಾಕಿದೆಯಾ? ಎಷ್ಟು ಸಾರಿ ಹೇಳಬೇಕು. ಚರಂಡಿಯ ಕಸ ತೆಗೆಯೋದಿಲ್ಲ. ಕ್ರಿಮಿನಾಶಕ ಹಾಕೋದಿಲ್ಲ. ಏನು ಮಾಡುತ್ತಿರುತ್ತೀಯಾ?"

ಕೆಂಚನಿಗೆ ಅಳುವೇ ಬಂತು. ಮುಖ ಬಾಡಿಸಿ ನಿಂತ.

ರಾಮಯ್ಯನಿಗೆ ಅಯ್ಯೋ ಎನಿಸಿತು.

"ಹೋಗಲಿ ಬಿಡು ಸೋಮು. ಯಾಕೆ ಬಯ್ಯುತ್ತೀಯಾ? ಒಂದು ನೊಣ ಬಂದರೆ ಏನಾಯ್ತು? ನಮ್ಮ ಮನೇಲಿ ಎಷ್ಟೋ ಹಾರಾಡುತ್ತವೆ" ಎಂದ ರಾಮಯ್ಯ.

ರಾಮಯ್ಯನ ಮಾತು ಸೋಮಯ್ಯನಿಗೆ ಹಿಡಿಸಲಿಲ್ಲ. ತಲೆಯನ್ನು ಅಲ್ಲಾಡಿಸಿದ. "ಏನು ಹೇಳಿದೆ ರಾಮು. ಒಂದು ನೊಣವೆ? ಅದರ ಕಾಲು ನೋಡಿದ್ದೀಯಾ? ತಿಪ್ಪೆಯ



ಚರಂಡಿಗೆ ಕ್ರಿಮಿನಾಶಕ ಸಿಂಪಡಿಸಬೇಕು

ರಾಶಿಯೇ ಅಲ್ಲಿರುತ್ತೆ. ಅದೇ ಕಾಲನ್ನು ತಿನ್ನುವ ಅನ್ನದ ಮೇಲೆ ಇರಿಸುತ್ತೆ. ಕೊಳಕ್ಕೆಲ್ಲಾ ಅನ್ನಕ್ಕೆ ಸೇರತ್ತೆ. ನಾವದನ್ನು ತಿನ್ನುತ್ತೇವೆ. ಇದರಿಂದ ಖಾಯಿಲೆ ಬರತ್ತೆ."


"ಓಹ್, ಅದೇನು ಮಾತು ಸೋಮು. ಒಂದು ನೊಣ ಅಷ್ಟೆಲ್ಲಾ ಮಾಡೋದಕ್ಕೆ ಸಾಧ್ಯವೇ? ನಾನು ನಂಬೋಲ್ಲ."

"ನಾನು ನಿನ್ನ ಹಾಗೇ ಅಂದುಕೊಂಡಿದ್ದೆ. ಇದನ್ನೆಲ್ಲ ನಂಬುತ್ತಿರಲಿಲ್ಲ. ಒಂದು ಸಲ ಕಾಲರಾ ಆಯಿತು. ತುಂಬಾ ಸುಸ್ತಾಗಿ ಬಿಟ್ಟೆ. ಸತ್ತೇ ಹೋಗುತ್ತೇನೇನೋ ಅನ್ನಿಸಿತ್ತು. ಈ ಕಾಯಿಲೆಗೆ ನೊಣವೇ ಕಾರಣ ಎಂದು ಡಾಕ್ಟರು ಹೇಳಿದರು. ಆಮೇಲೆ ನೊಣಕ್ಕೆ ಔಷಧಿ ಹಾಕಿಸಿದೆ. ಅಲ್ಲಿಂದೀಚೆಗೆ ಗುಂಡುಕಲ್ಲಿನ ಹಾಗೆ ಇದ್ದೇನೆ ನೋಡು" ಸೋಮಯ್ಯ ಭುಜ ತಟ್ಟಿಕೊಂಡ. ರಾಮಯ್ಯನಿಗೂ ನಿಜವಿರಬಹುದು ಎನಿಸಿತು. ಸುಮ್ಮನೆ ಊಟ ಮಾಡತೊಡಗಿದ.

***

ಮಕ್ಕಳ ಕಲ್ಯಾಣ ಇಲಾಖೆ ಇದೆ. ಇದು ಮಕ್ಕಳ ಕ್ಷೇಮ ಗಮನಿಸುತ್ತದೆ. ಹಾಗೆಯೇ ಮಹಿಳಾ ಕಲ್ಯಾಣ ಇಲಾಖೆ ಮಹಿಳೆಯರ ಕ್ಷೇಮ, ಅಭಿವೃದ್ಧಿ ಕಡೆ ಗಮನ ಹರಿಸುತ್ತಿದೆ. ನಮ್ಮ ಮಹಿಳೆಯರು ದುರ್ಬಲರು. ಅವರು ಪರಾವಲಂಬಿಗಳು. ಮೊದಲು ಅವರು ಸ್ವಾವಲಂಬಿಗಳಾಗಬೇಕು. ತುಂಬಾ ವಿದ್ಯೆ ಏನೂ ಬೇಡ. ಸ್ವಲ್ಪ ಕುಶಲತೆ ಇದ್ದರೂ ಸಾಕು. ಮನೆಯಲ್ಲೇ ಕುಳಿತು ಕೆಲಸ ಮಾಡಬಹುದು. ಸ್ವಯಂ ಉದ್ಯೋಗಿಯಾಗಬಹುದು. ಹಪ್ಪಳ, ಸಂಡಿಗೆ ತಯಾರಿಸಬಹುದು. ಹೆಣಿಗೆ ಕುರ್ಚಿ ಮಾಡುವುದು, ರೇಷ್ಮೆ ಕೃಷಿ ಮಾಡಬಹುದು, ಪಶು ಸಂಗೋಪನೆ ಮಾಡಬಹುದು, ಇದಕ್ಕೆಲ್ಲ ಸರಕಾರ ನೆರವು ಕೊಡುತ್ತದೆ. ಹಣಕಾಸಿನ ಸಹಾಯ ಕೊಡುತ್ತದೆ.

ಆರೋಗ್ಯವೇ ಭಾಗ್ಯ. ಮೊದಲು ಈ ಭಾಗ್ಯ ಚೆನ್ನಾಗಿರಬೇಕು. ಅದಕ್ಕೆ ಸ್ವಚ್ಛತೆ ಮುಖ್ಯ. ಶುಭ್ರತೆ ಮುಖ್ಯ. ನಾವು ದಿನವೂ ಸ್ನಾನ ಮಾಡಬೇಕು. ಒಗೆದ ಬಟ್ಟೆ ಧರಿಸಬೇಕು. ಅಷ್ಟೇ ಸಾಲದು, ಮನೆಯನ್ನು ಶುಭ್ರವಾಗಿರಿಸಬೇಕು. ಮನೆ ಮುಂದಿನ ಬೀದಿಯನ್ನು ಚೊಕ್ಕವಾಗಿರಿಸಬೇಕು. ಬಾವಿಯ ಬಳಿಯೇ ದನಕರುಗಳನ್ನು ಕಟ್ಟಿ, ಮೈ



ರಸ್ತೆ ಬದಿಯಲ್ಲಿ ಕೊಯ್ದು ತೆರೆದಿಟ್ಟ ಹಣ್ಣನ್ನು ತಿನ್ನಬೇಡಿ.

ತೊಳೆಯಬಾರದು, ಕುಡಿಯುವ ನೀರನ್ನು ಕೊಳಕು ಮಾಡಬಾರದು. ಹೀಗೆ ಮಾಡಿದರೆ ಕಾಯಿಲೆಗೆ ದಾರಿ ಮಾಡಿದಂತಾಗುತ್ತದೆ. ನಮಗೆ ಗೊತ್ತಿರುವ ಹಾಗೆ ಕುಟುಂಬ ಕಲ್ಯಾಣ ಇಲಾಖೆ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತದೆ. ಸಂತಾನ ತಡೆಗೆ ಗಮನ ನೀಡುತ್ತದೆ. ಅದಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ಒದಗಿಸುತ್ತದೆ. ಸಂತಾನ ನಿಯಂತ್ರಣಕ್ಕೆ ಅಗತ್ಯ ಸೌಲಭ್ಯಗಳು ಸರಕಾರಿ ಆಸ್ಪತ್ರೆಗಳಲ್ಲಿ ಸಿಗುತ್ತವೆ.

***

ಗೆಳೆಯರ ಊಟ ಮುಗಿಯಿತು. ಇಬ್ಬರೂ ಹಣ್ಣು ತಿಂದರು. ಸ್ವಲ್ಪ ಹೊತ್ತು ವಿರಮಿಸಿದರು. ನಂತರ ರಾಮಯ್ಯ ಊರಿಗೆ ಹೊರಟ. ಗೆಳೆಯನನ್ನು ಕಳಿಸಿಕೊಡಲು

ಸೋಮಯ್ಯನೂ ಹೊರಟ. ಸೋಮಯ್ಯನ ಹೆಂಡತಿಯೂ ಹೊರಗೆ ಬಂದಳು. ಅವಳ ಕೈಯಲ್ಲಿ ಒಂದು ಚೀಲ ಇತ್ತು. ಅದರಲ್ಲಿ ಹಣ್ಣು, ತರಕಾರಿ ಇದ್ದವು. ಅದನ್ನು ಸೋಮಯ್ಯ ರಾಮಯ್ಯನಿಗೆ ಕೊಟ್ಟ.

"ಇದು ಮನೆಯ ಹಿತ್ತಲಲ್ಲಿ ಬೆಳೆದದ್ದು. ಬಿಡುವಿನ ವೇಳೆಯಲ್ಲಿ ಇವಳು ತೋಟದ ಕೆಲಸ ಮಾಡುತ್ತಾಳೆ. ಎಂಥ ಜಾಣೆ ನೋಡು" ಎಂದು ನಕ್ಕ.



ಹಿತ್ತಿಲಲ್ಲಿ ಬೆಳೆದ ತರಕಾರಿಯನ್ನು ಗೆಳೆಯನಿಗೆ ಕೊಡುವ ಸೋಮಯ್ಯ

ರಾಮಯ್ಯನೂ ನಕ್ಕ. ತರಕಾರಿ ಚೀಲ ತೆಗೆದುಕೊಂಡ. ಚಪ್ಪಲಿ ಹಾಕಿಕೊಂಡು ಹೊರಟ. ಸೋಮಯ್ಯನೂ ಅವನೊಂದಿಗೆ ಹೊರಟ.

ಸೋಮಯ್ಯನ ಊರು ಈಗ ಹೊಸದರಂತೆ ಕಾಣುತ್ತಿತ್ತು. ಬೀದಿಯ ಅಕ್ಕಪಕ್ಕಕ್ಕೆ ದೀಪದ ಕಂಬಗಳು ಬಂದಿದ್ದವು. ಮನೆಮನೆಗೂ ವಿದ್ಯುತ್ ದೀಪಗಳು ಬಂದಿದ್ದವು. "ಇದೆಲ್ಲ ಸರಕಾರಿ ಯೋಜನೆಗಳ ಫಲ" ಎಂದ ಸೋಮಯ್ಯ. "ನಮ್ಮ ಹಳ್ಳಿಗೇಕೆ ಇಲ್ಲ" ಎನ್ನುವುದು ರಾಮಯ್ಯನ ಕೊರಗು.

"ಎಲ್ಲಾ ಹಳ್ಳಿಗಳಿಗೂ ಯೋಜನೆ ಅನ್ವಯಿಸುತ್ತದೆ. ಒಂದೊಂದು ಹಳ್ಳಿಯಲ್ಲಿ ವಿಳಂಬವಾಗಬಹುದು. ನೀವು ಸಂಬಂಧಿಸಿದ ಕಚೇರಿಗಳಲ್ಲಿ ವಿಚಾರಿಸಿ. ಸ್ವಲ್ಪ ಒತ್ತಾಯ ತನ್ನಿ. ನಿಮ್ಮ ಊರೂ ನಮ್ಮದರ ಹಾಗೇ ಆಗುತ್ತೆ" ಎಂದು ಸೋಮಯ್ಯ ಹೇಳಿಕೊಟ್ಟ.

ರಾಮಯ್ಯನ ಕಣ್ಣು ರಸ್ತೆಯತ್ತ ಹೋಯಿತು. ರಸ್ತೆಗೆ ಟಾರು ಹೊದಿಕೆಯಾಗಿತ್ತು. ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯುತ್ತಿತ್ತು. ಅಲ್ಲಲ್ಲಿ ಕೊಳಾಯಿಗಳಿದ್ದವು. ಬಾವಿಗಳೂ ಇದ್ದವು. ಪಾಠಶಾಲೆ ಇತ್ತು, ಆಸ್ಪತ್ರೆಯೂ ಇತ್ತು. ರಾಮಯ್ಯ ಇದನ್ನೆಲ್ಲ ನೋಡಿದ. ತನ್ನ ಊರಿನಲ್ಲಿ ಕೆಲಸಗಳು ನಿಧಾನವಾಗಿ ಆಗುತ್ತಿದೆ ಎಂದುಕೊಂಡ.

ಸೋಮಯ್ಯನಿಗೆ ಹೇಳಿದ "ಮೊದಲು ಜನರಿಗೆ ತಿಳಿವಳಿಕೆ ಬರಬೇಕು. ಆಗಲೇ ಹಳ್ಳಿ ಉದ್ಧಾರವಾಗೋದು. ಅಲ್ವಾ ಸೋಮು" ಎಂದ.

"ಅಹುದು, ಅಹುದು. ಜನರು ಲೋಕ ಜ್ಞಾನ ಪಡೆಯಬೇಕು. ಅಕ್ಷರ ಕಲಿಯಬೇಕು. ಆಗಲೇ ಹಳ್ಳಿ ಉದ್ಧಾರವಾಗೋದು. ದೇಶದ ಬೆಳವಣಿಗೆಯಾಗೋದು" ಎಂದು ಸೋಮಯ್ಯನೂ ಧ್ವನಿ ಕೂಡಿಸಿದ.

ಬಸ್ಸು ಬಂತು. ರಾಮಯ್ಯ ಬಸ್ಸು ಹತ್ತಿದ. ಬಸ್ಸು ಹೊರಟಿತು. ಸೋಮಯ್ಯ ಕೈಯಾಡಿಸಿದ. ರಾಮಯ್ಯನೂ ಕೈಯಾಡಿಸಿದ. ಬಸ್ಸು ಮುಂದೆ ಸಾಗಿತು.

ನಮ್ಮ ದೇಶದ ಯೋಜನೆಗಳಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆ ಸಿಕ್ಕಿದೆ. ನಾವೀಗ ಇಪ್ಪತ್ತೊಂದನೇ ಶತಮಾನದ ಅಂಗಳದಲ್ಲಿದ್ದೇವೆ. ಎಲ್ಲೆಲ್ಲೂ ಸಾಕ್ಷರತಾ



ಸ್ವಾವಲಂಬಿಗಳಾಗುವ ದಿಕ್ಕಿನಲ್ಲಿ ಮಹಿಳೆಯರು

ಆಂದೋಲನಗಳಾಗುತ್ತಿವೆ. ನಾವೂ ಅಕ್ಷರಸ್ಥರಾಗುತ್ತಿದ್ದೇವೆ. ನಾವೀಗ ಓದಬಲ್ಲೆವು. ಬರೆಯಬಲ್ಲೆವು. ವಿಷಯಗಳನ್ನು ತಿಳಿದುಕೊಳ್ಳಬಲ್ಲೆವು. ಇನ್ನೂ ಹೆಚ್ಚು ಕಲಿಯುವ ಶಕ್ತಿಯೂ ಇದೆ. ಕಲಿಸುವ ವ್ಯವಸ್ಥೆಯೂ ಇದೆ. ನಾವೂ ಕಲಿಯೋಣ. ಕಲಿಸೋಣ. ಚಿಕ್ಕ ಮಕ್ಕಳಿಗೆ ಶಾಲೆಯ ವಿದ್ಯಾಭ್ಯಾಸ ಕೊಡಿಸೋಣ. ದೊಡ್ಡವರಿಗೆ ವಯಸ್ಕರ ಶಿಕ್ಷಣ ಇದೆ. ಶಿಕ್ಷಣ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳೋಣ.

ಬಸ್ಸು ರಾಮಯ್ಯನ ಹಳ್ಳಿಯಲ್ಲಿ ನಿಂತಿತು. ರಾಮಯ್ಯ ಕೆಳಗಿಳಿದ. ಮನೆಯ ಕಡೆಗೆ ನಡೆದ. ಅವನ ಗಮನ ರಸ್ತೆಯತ್ತ ಹೋಯಿತು. ಕಲ್ಲುಮಣ್ಣಿನ ದಾರಿ. ಟಾರು ಹಾಕಿರಲಿಲ್ಲ. ಹಳ್ಳಿಯವರೂ ಕೇಳಿರಲಿಲ್ಲ. 'ನಾಳೆಯೇ ಲೋಕೋಪಯೋಗಿ ಇಲಾಖೆಗೆ ಹೋಗಬೇಕು. ರಸ್ತೆ ದುರಸ್ತಿ ಮಾಡಲು ಕೇಳಬೇಕು. ಜೊತೆಗೆ ಮುಖಂಡ ನಾಗಯ್ಯನನ್ನು ಕರೆದುಕೊಂಡು ಹೋಗಬೇಕು' ಎಂದುಕೊಂಡ.

ಮುಂದಿನಿಂದ ಕಮಲಿ ಬರುತ್ತಿದ್ದಳು. ಕಂಕುಳಲ್ಲಿ ಒಂದು ಮಗುವಿತ್ತು. ಜೊತೆಗೆರಡು ಮಕ್ಕಳು ಓಡಿಬರುತ್ತಿದ್ದವು. ಅವಳು ಪರಿಶಿಷ್ಟ ಪಂಗಡದವಳು. ಅವರನ್ನು ಇತರರು ಅಷ್ಟಾಗಿ ಮಾತನಾಡಿಸುತ್ತಿರಲಿಲ್ಲ. ಅವಳ ಮಕ್ಕಳನ್ನೇ ನೋಡಿದ. ಅವಳ ಸಂಸಾರವೂ ತನ್ನದರಂತೆ ಆಗಬಾರದು ಎನಿಸಿತು. 'ಕಮಲಿ' ಎಂದ. ಕಮಲಿಗೆ ಅಚ್ಚರಿಯಾಯಿತು. 'ಏನು ಬುದ್ಧಿ' ಎಂದಳು.

"ಮಕ್ಕಳಿಗೆ ರೋಗ ನಿರೋಧಕ ಲಸಿಕೆ ಕೊಡಿಸಿದ್ದೀಯಾ?" ಎಂದ ರಾಮಯ್ಯ. "ಅದೇನು ಬುದ್ಧಿ" ಎಂದಳು ಕಮಲಿ.

"ಕಮಲಿ, ನಾಳೆನೇ ಆಸ್ಪತ್ರೆಗೆ ಹೋಗು. ವೈದ್ಯರನ್ನು ಕೇಳು. ಮಕ್ಕಳಿಗೆ ಲಸಿಕೆ ಹಾಕಿ ಅನ್ನು"

"ಅದಕ್ಕೆಲ್ಲ ನನ್ನ ತಾವ ಕಾಸಿಲ್ಲ ಬುದ್ಧಿ" ಎಂದಳು.

"ಅದಕ್ಕೆ ಹಣ ಬೇಡ. ಹಾಗೇ ಹಾಕುತ್ತಾರೆ. ಹೋಗಿ ಕೇಳು" ಎಂದ ರಾಮಯ್ಯ. "ಹ್ಞಾ... ಅಂದಹಾಗೆ, ಇಷ್ಟೇ ಮಕ್ಕಳು ಸಾಕೂಂತ ವೈದ್ಯರಿಗೆ ಹೇಳು. ಸಲಹೆ ತೆಗೆದುಕೋ" ಎಂದೂ ಸೇರಿಸಿದ.

ಕಮಲಿ ನಾಚಿಕೊಂಡಳು. 'ಆಗಲಿ' ಎಂದಳು.



ರಾಮಯ್ಯ ಮನೆಗೆ ಬಂದ. ದೊಡ್ಡ ಮಕ್ಕಳಿಬ್ಬರೂ ಕಲ್ಲಾಟ ಆಡುತ್ತಿದ್ದರು. ಸಮಯ ಹಾಳು ಮಾಡುತ್ತಿದ್ದರು. ರಾಮಯ್ಯ ಅವರನ್ನು ಕರೆದುಕೊಂಡು ಹೊರಬಂದ. ವಯಸ್ಕರ ಶಾಲೆಗೆ ಹೋದರು. ಶಾಲೆಗೆ ಸೇರಿಸಿದ.

ಮರುದಿನ ಮುಖಂಡನ ಮನೆಗೆ ಹೋದ. ಇಬ್ಬರೂ ಹಲವು ಕಚೇರಿಗಳಿಗೆ ಭೇಟಿ ನೀಡಿದರು. ರಸ್ತೆ ದುರಸ್ತಿಗೆ ಅರ್ಜಿ ನೀಡಿದರು. ಶಾಲೆಗೆ ಉಪಕರಣಗಳನ್ನು



ಕಲುಷಿತ ನೀರು

ಕೇಳಿದರು. ಆಸ್ಪತ್ರೆಗೆ ಹೆಚ್ಚಿನ ಸವಲತ್ತು ಕೇಳಿದರು. ವಿದ್ಯುತ್ ದೀಪ, ಕೊಳಾಯಿಗೆ ಬೇಡಿಕೆ ಸಲ್ಲಿಸಿದರು.

ಮತ್ತೆ ರಾಮಯ್ಯ ಸಹಕಾರ ಸಂಘಕ್ಕೆ ಹೋದ. ಸಾಲ ಪಡೆದುಕೊಂಡ. ಏನೂ ತೊಂದರೆಯಾಗಲಿಲ್ಲ. ಹಸು ಕೊಂಡು ತಂದ. ಅದರ ಪಾಲನೆ ಅವನ ಹೆಂಡತಿಗೆ. ತಾನು ಜಮೀನಿನಲ್ಲಿ ದುಡಿದ.

ಕಾಲ ಉರುಳಿತು. ಫಸಲು ಚೆನ್ನಾಗಿ ಬಂತು. ಮನೆಮಂದಿಗೆಲ್ಲಾ ಸಂತೋಷವಾಯಿತು. ಹೊಟ್ಟೆ ತುಂಬಾ ಉಂಡರು. ಹೊಸಬಟ್ಟೆ ತೊಟ್ಟರು. ಹೆಚ್ಚಾದ ಫಸಲನ್ನು ಸರಕಾರಿ ಮಾರುಕಟ್ಟೆಯಲ್ಲಿ ಮಾರಿದರು. ಕೈತುಂಬಾ ಹಣವೂ ಸೇರಿತು. ಚಿಕ್ಕ ಮಕ್ಕಳು ಕೂಲಿ ಕೆಲಸ ನಿಲ್ಲಿಸಿದರು. ಶಾಲೆಗೆ ಸೇರಿದರು. ರಾಮಯ್ಯ ತಂದ ಸಾಲವನ್ನು ಹಿಂತಿರುಗಿಸಲು ಮರೆಯಲಿಲ್ಲ. ಮನೆ ನಂದಗೋಕುಲವಾಯಿತು.

***

ಪ್ರತಿ ಹಳ್ಳಿಯೂ ಹೀಗಾಗಬೇಕು. ಇದಕ್ಕೆ ಸರಕಾರದ ಯೋಜನೆಗಳ ನೆರವಿದೆ. ಗ್ರಾಮೀಣ ಅಭಿವೃದ್ಧಿಯೇ ಯೋಜನೆಗಳ ಗುರಿ. ಹಾಗಾದಾಗಲೇ ಜನರ ಹಿತ ಸಾಧ್ಯ. ದೇಶದ ಉದ್ಧಾರ ಸಾಧ್ಯ.

***

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ: ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು